
ನಮ್ಮ ಸೋದರತ್ತೆಯ ಕಡೆಯ ಬಳಗದಲ್ಲಿ ಶಂಕ್ರಣ್ಣ ಅಂತ ಒಬ್ಬನಿದ್ದ. ವರಸೆಯಲ್ಲಿ ಆತ ನನಗೆ ಚಿಕ್ಕಪ್ಪ ಆಗಬೇಕು. 'ನಿರ್ಲಜ್ಜ್ಯಂ ಸದಾ ಸುಖಿ' ಅಂಬೋ ಮಾತಿಗೆ ಹೇಳಿಮಾಡಿಸಿದ ಕುಳ. ಯಾರು ಏನೆಂದುಕೊಂಡಾರು ಎಂಬುದಕ್ಕೆಲ್ಲ ತಲೆ ಕೆಡಿಸಿಕೊಳ್ಳದೆ, ಬಯಸಿದ್ದನ್ನು ಬೇಡಿಯಾದರೂ ಸೈ, ಕಾಡಿಯಾದರೂ ಸೈ, ಪಡೆಯಬೇಕೆನ್ನುವ ಭೂಪ. ಇದಿಷ್ಟೇ ಸಾಲದೆಂಬಂತೆ, ಭಯಂಕರ ವಾಚಾಳಿ. ಈ ಬಡಾಯಿತನ ಆತನ ಬಂಡವಾಳ ಕೂಡ.

ಎಂಥದ್ದೊ ಸಂಬಂಧದ ಎಳೆ ಹಿಡಿದುಕೊಂಡು, ಇಡೀ ಹಚ್ಚಡವನ್ನು ನುಂಗಿ, ನೀರು ಕುಡಿಯಬಲ್ಲ ಪ್ರಚಂಡ, ಈ ಶಂಕ್ರಣ್ಣ! ಎರಡ್ಮೂರು ತಿಂಗಳಿಗೊಮ್ಮೆ ಈತನ ಸವಾರಿ ನಮ್ಮನೆಗೂ ಬರುತ್ತಿತ್ತು. ಆತ ಬರುವಲ್ಲಿ ಒಂದೆರಡು ದಿನ ಹೆಚ್ಚು ಕಡಿಮೆಯಾದಲ್ಲಿ ನಮ್ಮವ್ವ, 'ಶಂಕ್ರೆಣ್ಣ್ಯಾಕೊ ಬರಾಂವಾ ಇನ್ನೂ ಬಂದಿಲ್ಲಾ, ಖೋಡಿನ ತಂದು' ಎಂದು ಬೈಯುತ್ತಲೆ, ಕಕ್ಕುಲಾತಿಯಿಂದ ಆತನ ದಾರಿ ನೋಡುತ್ತಿದ್ದದ್ದು ನಮಗೆಲ್ಲ ಸೋಜಿಗವೆನಿಸಿತ್ತು.



ಹೀಗೆ ಕಂಡಕಂಡವರ ಮನೆ ಬಾಗಿಲು ತಟ್ಟಿ, 'ಹ್ಹೀ... ಹ್ಹೀ... ಹ್ಹೀ...' ಎಂದು ಜಗದಗಲ ಬಾಯಿ ಅಗಲಿಸುತ್ತ, ಮನೆಯೊಳಗೆ ನುಸುಳಿದನೆಂದರೆ ಮುಗಿಯಿತು... ಬಳು ಹೊಕ್ಕಂತೆ, 'ಹರೋ ಹರಾ!' ಮನೆಯೊಡೆಯನ ಉದಾರತೆಯನ್ನೂ, ಮನೆಯಾಕೆಯ ಕೈರುಚಿಯನ್ನೂ ಹೊನ್ನಶೂಲಕ್ಕೇರಿಸುತ್ತಿದ್ದ. 'ಗಂಗಾಳ ಕಂಡಲ್ಲಿ ಉಂಬುವ, ಇಂಬು ಕಂಡಲ್ಲಿ ಮಲಗುವ' ಈತ, ಎಲ್ಲೆಂದರಲ್ಲಿ ಮನತಣಿದು ಉಂಡೆದ್ದು ಬರಬಲ್ಲ ಜಾಣ ಬೀರಬಲ್ಲ!

'ಯಾಕೋ ಹಿಂಗ್ಮಾಡ್ತಿ?... ಹಿಂಗಾದ್ರ ನಿನಗ್ಯಾರು ಕಿಮ್ಮತ್ತ ಕೊಡ್ತಾರೊ ಶಂಕ್ರೂ?... ಒಂದೀಟ್ ವಜನ್ನೆ ಇರ್ಬೇಕಪಾ...' ನಮ್ಮಪ್ಪನ ಹಿತನುಡಿಗೆ,

'ಯಣಾ, ಹಂಗೆಲ್ಲಾ ಕಿಮ್ಮತ್ತ ಗಿಮ್ಮತ್ತ ಅಂತ ಕುಂತ್ರ ಸುಖಾ ಸಿಗ್ತದೇನೂ?'

'ಅಲ್ಲೋ, ಎದುರಿಗೆ ಸುಮ್ನಿದ್ದಾವು, ಆಮ್ಯಾಲ ಹಿಂದಿಂದ ನಿನಗ ಬೈತಾರೊ, ಖಬರಗೇಡಿ...' ಅಪ್ಪನ ಆಕ್ಷೇಪ.

'ಬೈದವರೆಮ್ಮ ಬಂಧುಗಳೆಂಬೆ... ಹಂಗಂತ ಬಸವಣ್ಣನವ್ರೇ ಹೇಳ್ಯಾರಲ್ಲಾ. ಬೈಸಿಕೊಂಡರೇನಾಯ್ತು ಬಿಡೂ ಯಣಾ, ಹೊಟ್ಟೀ ತುಂಬಾ ಊಟಾ ಸಿಗ್ತದಲ್ಲಾ...' ಎಂದುತ್ತರಿಸುತ್ತಲೆ ಅಡಿಗೆ ಮನೆಯತ್ತ ಕಣ್ಣು ಹರಿಬಿಡುತ್ತಿದ್ದ.